ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/2064/2019/ಎಆರ್ಇ-20

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:17-08-2022

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ಅನ್ವಯ ವರದಿ**

ವಿಷಯ: ಶ್ರೀ ಎ.ಹೆಚ್. ನಾಗರಾಜ್, ಮುಖ್ಯಾಧಿಕಾರಿ, ನಗರಸಭೆ, ವಿಜಯಪುರ ಟೌನ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಎದುರುದಾರರು) ದುರ್ನಡತೆ/ಕರ್ತವ್ಯ ಲೋಪದ ಕುರಿತು.

#####

ಶ್ರೀಮತಿ ಮುನಿರತ್ನ.ಆರ್. ಕೋಂ ರಾಮಾಂಜಿನಪ್ಪ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ ಶ್ರೀ ಎ.ಹೆಚ್. ನಾಗರಾಜ್, ಮುಖ್ಯಾದಿಕಾರಿ, ಟೌನ್ ಮುನ್ಸಿಪಲ್ ಕಛೇರಿ, ವಿಜಯಪುರ ಟೌನ್, ದೇವನಹಳ್ಳಿ ತಾ: ಇವರ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ವಿರುದ್ದ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**2. ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರಾದ ಶ್ರೀಮತಿ ಮುನಿರತ್ನ ಗಂಡ ಶ್ರೀ ರಾಮಾಂಜಿನಪ್ಪ ಇವರು ವಿಜಯಪುರ ಪುರಸಭೆಯಲ್ಲಿ 22 ವರ್ಷಗಳಿಂದ ವಾಟರ್‌ಮ್ಯಾನ್ ಆಗಿ ಕೆಲಸ ನಿರ್ವಹಿಸುತ್ತಿದ್ದು ದಿನಾಂಕ:09-07-2019ರಂದು ದೂರುದಾರರ ಗಂಡನಿಗೆ ದೂರವಾಣಿ ಕರೆ ಮಾಡಿ 23ನೇ ವಾರ್ಡಿನ ಪುರಸಭಾ ಸದಸ್ಯರ ಪತಿ ಎ.ಆರ್. ಹನೀಫ್ ಉಲ್ಲಾ ರವರ ಮೇಲೆ ಸಾರ್ವಜನಿಕರಿಂದ ಹಣ ಪಡೆದಿದ್ದಾರೆ ಎಂದು 25 ದೂರುಗಳನ್ನು ತೆಗೆದುಕೊಂಡು ಬರಲು ಒತ್ತಾಯಿಸಿದ್ದು, ಸುಳ್ಳು ಆರೋಪ ಮಾಡಿ ಅಮಾನತ್ತು ಮಾಡುತ್ತೇವೆ ಇಲ್ಲವಾದಲ್ಲಿ ಬೇರೆ ಊರಿಗೆ ವರ್ಗಾವಣೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದು, ದೂರುದಾರರ ಗಂಡನು ಕಿರುಕುಳ ತಾಳದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೇಳಿರುತ್ತಾರೆಂದು ಸದರಿ ಸಂಭಾಷಣೆಯನ್ನು ದೂರಿನೊಂದಿಗೆ ಲಗತ್ತಿಸಿರುವುದಾಗಿ ಎದುರುದಾರರ ವಿರುದ್ದ ಕ್ರಮಕೈಗೊಳ್ಳಲು ವಿನಂತಿಸಿಕೊಂಡಿರುತ್ತಾರೆ.

**3. ಎದುರುದಾರರ ಆಕ್ಷೇಪಣೆ:**

ಎದುರುದಾರರು ದಿನಾಂಕ:10-03-2022ರಂತೆ ಸಲ್ಲಿಸಿ ಸದರಿ ಆಪಾದನೆಯನ್ನು ನಿರಾಕರಿಸಿರುತ್ತಾರೆ. ಯಲುವಳ್ಳಿ ಕೆರೆಯಿಂದ ಪಟ್ಟಣಕ್ಕೆ ನೀರು ಪೂರೈಕೆ ಮಾಡುವ ಪೈಪ್‌ಲೈನ್ ಒಡೆದು ಬಹಳ ಸಮಯದ ತನಕ ನೀರು ಸೋರಿಕೆಯಾಗಿದ್ದರೂ ಸಹ ದೂರುದಾರರ ಪತಿಯು ಕಿರಿಯ ಅಭಿಯಂತರರಿಗೆ ಅಥವಾ ಮುಖ್ಯಾಧಿಕಾರಿಗಳಿಗೆ ಮಾಹಿತಿ ನೀಡಿರಲಿಲ್ಲ ಹಾಗೂ ಸೋರಿಕೆಯಾದ ನೀರಿಗೆ ಪಂಪ್ ಅಳವಡಿಸಿ ಕೃಷಿ ಜಮೀನಿಗೆ ಉಪಯೋಗಿಸಿಕೊಳ್ಳಲು ಎದುರುದಾರರು ಸಹಾಯ ಮಾಡಿದ್ದರಿಂದ ನಾಗರೀಕರಿಗೆ ಕುಡಿಯುವ ನೀರಿನ ಅಭಾವ ಉಂಟಾಗಿರುವುದು, ಸದರಿ ಮಾಹಿತಿಯು ಪತ್ರಿಕೆಗಳಲ್ಲಿ ಬಂದು ಮುಜುಗರ ಉಂಟಾಗಿರುವುದು, ನೀರು ಸರಬರಾಜು ವ್ಯವಸ್ಥೆಗೆ ಧಕ್ಕೆಯುಂಟು ಮಾಡಿರುವ ನೌಕರನ ವಿರುದ್ಧ ಶಿಸ್ತು ಕ್ರಮ ಕೈಗೊಂಡು 3 ದಿನಗಳ ಒಳಗೆ ವರದಿ ಸಲ್ಲಿಸುವಂತೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಇವರು ದಿನಾಂಕ:20-04-2018ರ ಪತ್ರದಲ್ಲಿ ಸೂಚಿಸಿದ ಮೇರೆಗೆ ದೂರುದಾರರ ಪತಿಯನ್ನು ಮೇಲ್ವಿಚಾರಕರ ಕೆಲಸದಿಂದ ಬದಲಾವಣೆ ಮಾಡಿ ಪಂಪ್‌ಹೌಸ್ ಕಾವಲುಗಾರನ ಕರ್ತವ್ಯಕ್ಕೆ ನಿಯೋಜಿಸಿದ್ದು, ದೂರುದಾರರ ಪತಿಯು ಎಂ.ಮಂಜುನಾಥ ಮತ್ತು ಕುಮಾರ ಇವರುಗಳಿಗೆ ಸಹಕರಿಸದೇ, ನಿಂದಿಸಿ ಹಲ್ಲೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ವಾರ್ಡ್ ನಂ.4ರ ಶುದ್ಧ ನೀರಿನ ಘಟಕದ ಬಳಿ ಪೈಪ್‌ಲೈನ್‌ಗೆ 3 ಇಂಚಿನ ವಾಲ್ ಅನ್ನು ಅಳವಡಿಸಿ ಕುಡಿಯುವ ನೀರನ್ನು ವ್ಯವಸಾಯಕ್ಕೆ ಬಳಸಲು ರೈತರಿಗೆ ದೂರುದಾರರ ಪತಿಯು ಸಹಕರಿಸಿ ಶಾಮೀಲಾಗಿದ್ದು ಪಟ್ಟಣದಲ್ಲಿ ಅಕ್ರಮ ನಲ್ಲಿ ಸಂಪರ್ಕಗಳನ್ನು ಪಡೆಯಲು ಸಹಕರಿಸಿದ್ದು, ಅಸ್ತಿತ್ವದಲ್ಲಿರುವ 106 ಬೋರ್‌ವೆಲ್‌ಗಳ ಪೈಕಿ 72 ಬೋರ್‌ವೆಲ್‌ಗಳಿಗೆ ಪಂಪು ಮೋಟಾರುಗಳನ್ನು ಅಳವಡಿಸಿ ಉಳಿದ ಬೋರ್‌ವೆಲ್‌ಗಳಿಗೆ ಈ ಹಿಂದೆ ಅಳವಡಿಸಿದ್ದ ಪಂಪು ಮೋಟಾರುಗಳು ಏನಾಗಿದೆ ಎಂಬುದರ ಮಾಹಿತಿ ನೀಡಿರುವುದಿಲ್ಲವೆಂದು ಮತ್ತು ಪುರಸಭೆಯಿಂದ ಅನುಮತಿ ಪಡೆಯದೇ ದೂರುದಾರರು ಕೋಲಾರ ಬೈಪಾಸ್ ರಸ್ತೆಗೆ ಹೊಂದಿಕೊಂಡಂತೆ ಇರುವ ಪಂಪ್‌ಹೌಸ್‌ನಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದು ಪಂಪ್‌ಹೌಸ್‌ಗೆ ಸೇರಿದ ರಸ್ತೆಗೆ ಹೊಂದಿಕೊಂಡಿರುವ ಜಾಗದಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿರುತ್ತಾರೆಂದು ಮತ್ತು ಸ್ಥಳೀಯ ಪ್ರತಿನಿದಿಗಳು ಇವರೊಂದಿಗೆ ಶಾಮೀಲಾಗಿ ಅನಧಿಕೃತ ನಲ್ಲಿ ಸಂಪರ್ಕಗಳನ್ನು ನೀಡಿದ್ದು ಶ್ರೀಮತಿ ಗೀತಾ ರಾಮಚಂದ್ರಪ್ಪ ಇವರಿಂದ 1 ಬೋರ್‌ವೆಲ್ ಅನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆದು 3 ವಾರ್ಡ್‌ಗಳಿಗೆ ನೀರು ಸರಬರಾಜು ಮಾಡಿದಂತೆ 3 ಬೋಗಸ್ ಬಿಲ್ಲುಗಳನ್ನು ಸೃಷ್ಟಿಸಿ ಅಂದಾಜು ರೂ.25-00 ಲಕ್ಷಗಳನ್ನು ಪಾವತಿಸುವಂತೆ ಸದರಿ ವಾರ್ಡ್‌ಗಳ ಸದಸ್ಯರುಗಳು ಒತ್ತಾಯ ಹಾಕುತ್ತಿದ್ದು, ಸದರಿ ಪ್ರತಿನಿಧಿಗಳೊಂದಿಗೆ ದೂರುದಾರರ ಪತಿಯು ಶಾಮೀಲಾಗಿದ್ದು ಇವುಗಳನ್ನು ಪ್ರಶ್ನಿಸಿದ ಮೇರೆಗೆ ದೂರುದಾರರು ತಮ್ಮ ರಾಜಕೀಯ ಪ್ರಭಾವ ಬಳಸಿ ಸದರಿಯವರನ್ನು ದಿನಾಂಕ:18-9-2019ರಂದು ವಿಜಯಪುರ ಪುರಸಭೆಯಿಂದ ವರ್ಗಾವಣೆ ಮಾಡಿಸಿರುತ್ತಾರೆಂದು ತಿಳಿಸುತ್ತಾ ದೂರನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ.

**4. ಅಮರೇಶ್ ಗೌಡ.ಎ., ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವರದಿ:**

ದಿನಾಂಕ:16-12-2021ರಂತೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಯಲುವಳ್ಳಿ ಕೆರೆ ಬಳಿ ನೀರು ಸೋರಿಕೆಯಾಗುತ್ತಿರುವ ಬಗ್ಗೆ ಎದುರುದಾರರಾದ ಶ್ರೀ ಎ.ಹೆಚ್. ನಾಗರಾಜ್ ಇವರಿಗೆ ಮೌಖಿಕವಾಗಿ ಹಲವಾರು ಬಾರಿ ತಿಳಿಸಿ, ನಂತರ ಲಿಖಿತ ರೂಪದಲ್ಲಿ ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳದೇ ಇರುತ್ತಾರೆಂದು, ಸಂತೋಷ್ ಎಂಟರ್‌ಪ್ರೈಸಸ್‌ನ ಸಂತೋಷ್ ಇವರನ್ನು ಕರೆದು ಹೇಳಿಕೆ ಮಾಡಿಕೊಂಡಿದ್ದು ಮೋಟಾರ್ ಪಂಪ್ ರಿಪೇರಿ ಕೆಲಸಗಳನ್ನು 2017ರಲ್ಲೇ ನಿಲ್ಲಿಸಿದ್ದು ದಿನಾಂಕ:07-09-2018ರಂದು ತಾವಾಗಲೀ ತಮ್ಮ ಕಂಪನಿ ಕಡೆಯಿಂದ ಯಾರೂ ಯಲುವಳ್ಳಿ ಕೆರೆ ಬಳಿ ಕೆಲಸಕ್ಕೆ ಹೋಗಿರುವುದಿಲ್ಲವೆಂದು ತಿಳಿಸಿರುತ್ತಾರೆಂದು, ಚಿಕ್ಕನಹಳ್ಳಿ ಕೆರೆಯಲ್ಲಿ ಸಮಸ್ಯೆ ಕಂಡುಬಂದಿದ್ದು, ಯಲುವಳ್ಳಿ ಕೆರೆಯ ಮೇಸ್ತ್ರಿಯಾದ ರಾಮಾಂಜಿನಪ್ಪ ಇವರಿಗೆ ಸಂಬಂಧವೇ ಇಲ್ಲದಿದ್ದರೂ ಎದುರುದಾರರು ರಾಮಾಂಜಿನಪ್ಪ ಇವರು ಸದರಿ ಸಮಸ್ಯೆಗೆ ಕಾರಣ ಎಂದು ಬೇರೊಂದು ನಗರ ಸ್ಥಳೀಯ ಸಂಸ್ಥೆಗೆ ನಿಯೋಜಿಸಲು ಎದುರುದಾರರು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತಾರೆಂದು, ಶಿವಕುಮಾರ್ ಮತ್ತು ಉಮೇಶ್ ಇವರುಗಳು ರಾಮಾಂಜಿನಪ್ಪ ಇವರ ವಿರುದ್ಧ ಮುಖ್ಯಾಧಿಕಾರಿಗಳಿಗೆ ಯಾವುದೇ ದೂರು ನೀಡಿರುವುದಿಲ್ಲ, ಬದಲಿಗೆ ಎದುರುದಾರರು ಯಾರೋ ಬರೆದಿದ್ದ ದೂರನ್ನು ನೀಡಿ ಸಹಿ ಹಾಕಲು ಹೇಳಿದ್ದರು ಅದರಂತೆ ಸಹಿ ಮಾಡಿರುತ್ತೇವೆ ಎಂದು ಶಿವಕುಮಾರ್ ಮತ್ತು ಉಮೇಶ್ ಇವರು ತಿಳಿಸಿದ್ದು, ರಾಮಾಂಜಿನಪ್ಪ ಇವರನ್ನು ಗುರಿಯಾಗಿಸಿ ತೊಂದರೆ ಕೊಡುವ ಉದ್ದೇಶದಿಂದ ಮಾಡಿರುತ್ತಾರೆಂದು, ಅಕ್ರಮ ನಲ್ಲಿ ಸಂಪರ್ಕ ಮತ್ತು ಜನಪ್ರತಿನಿಧಿಗಳೊಂದಿಗೆ ಪರೋಕ್ಷವಾಗಿ ಸಹಕರಿಸಿ ಪುರಸಭೆಗೆ ಹೆಚ್ಚಿನ ಆರ್ಥಿಕ ನಷ್ಟ ಉಂಟು ಮಾಡಿದ್ದರ ಸಂಬಂಧ ಎದುರುದಾರರು ಯಾವುದೇ ನೋಟೀಸ್ ನೀಡಿರುವುದಿಲ್ಲ ಹಾಗೂ ಕ್ರಮ ಕೈಗೊಂಡಿರುವುದಿಲ್ಲವೆಂದು, 72 ಬೋರ್‌ವೆಲ್‌ಗಳಿಗೆ ಪಂಪ್ ಮೋಟಾರ್ ಅಳವಡಿಸಿರುವುದು, ಹಿಂದೆ ಅಳವಡಿಸಿದ್ದ ಪಂಪ್ ಮೋಟಾರುಗಳು ಏನಾದವು, ಖರೀದಿಸಿದ ಪೈಪ್, ಕೇಬಲ್ ಮತ್ತು ಸ್ಟಾರ್ಟರ್‌ಗಳು ಮತ್ತಿತರೆ ಸಾಮಗ್ರಿಗಳನ್ನು ಉಪಯೋಗಿಸಿದ ಬಗ್ಗೆ ಮಾಹಿತಿ ಇಲ್ಲದಿರುವುದು ರಾಮಾಂಜಿನಪ್ಪ ಇವರ ಕರ್ತವ್ಯವಾಗಿರದೇ, ಕಿರಿಯ ಅಭಿಯಂತರರ ಕರ್ತವ್ಯವಾಗಿದ್ದು ದಿನಾಂಕ:09-11-2021ರ ವರದಿಯಲ್ಲಿ ಮುಖ್ಯಾಧಿಕಾರಿಗಳು ಯಾವುದೇ ಲೋಪವಾಗಿರುವ ಬಗ್ಗೆ ದಾಖಲೆಗಳು ಕಂಡುಬಂದಿಲ್ಲವೆಂದು ತಿಳಿಸಿರುತ್ತಾರೆಂದು, ರಾಮಾಂಜಿನಪ್ಪ ಇವರು ಅಕ್ರಮವಾಗಿ ಇಟ್ಟುಕೊಂಡಿರುವ ಪೆಟ್ಟಿಗೆ ಅಂಗಡಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿರುವ ಸಂಬಂಧ ಯಾವುದೇ ನೋಟೀಸ್ ನೀಡಿರುವುದಿಲ್ಲ ಹಾಗೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ, ನೀರು ಸರಬರಾಜು ಮಾಡಲಾಗಿದೆ ಎಂದು ನಕಲಿ ಬಿಲ್ಲುಗಳನ್ನು ಹಾಜರುಪಡಿಸಿದ್ದರೆ ಎದುರುದಾರರು ಕ್ರಿಮಿನಲ್ ಮೊಕದ್ದಮೆ ದಾಖಲಿಸಬಹುದಿತ್ತು ಎಂದು, ದೂರುದಾರರು ದೂರು ಸಲ್ಲಿಸುವಾಗ ಹಾಜರುಪಡಿಸಿದಂತಹ ಆಡಿಯೋ ಕ್ಲಿಪಿನಲ್ಲಿ ಎದುರುದಾರರು 25 ದೂರುಗಳನ್ನು ತರದೇ ಇದ್ದಲ್ಲಿ ನಿನಗೆ ಏನು ಮಾಡುತ್ತೇನೆ ನೋಡು ಎಂದು ರಾಮಾಂಜಿನಪ್ಪ ಇವರನ್ನು ಬೆದರಿಸಿರುವುದು ಕಂಡು ಬಂದಿರುತ್ತದೆ ಎಂದು, ಸಾರ್ವಜನಿಕರು, ಸರ್ಕಾರ ಮತ್ತು

ಇತರರು ಒಟ್ಟು 15 ದೂರು/ಮನವಿಗಳನ್ನು ಸಲ್ಲಿಸಿದ್ದು, ಸದರಿ 15 ದೂರು/ಮನವಿಗಳ ಪೈಕಿ 6 ಅರ್ಜಿಗಳು ಪುರಸಭೆಯ ಎದುರುದಾರರಾದ ಶ್ರೀ ಎ.ಹೆಚ್. ನಾಗರಾಜು ಇವರ ವಿರುದ್ಧವೇ ದಾಖಲಾಗಿರುತ್ತವೆ ಎಂದು ತಿಳಿಸಿರುತ್ತಾರೆ. ಎದುರುದಾರರು ಪುರಸಭಾ ಸದಸ್ಯರಾದ ಶ್ರೀ ಹನೀಫುಲ್ಲಾ ಇವರ ವಿರುದ್ದದ ವೈಯಕ್ತಿಕ ದ್ವೇಷ ಸಾಧಿಸಿಕೊಳ್ಳುವ ಸಲುವಾಗಿ ರಾಮಾಂಜಿನಪ್ಪ ಇವರ ಮೇಲೆ ಒತ್ತಡ ಹೇರಿದ್ದು, ರಾಮಾಂಜಿನಪ್ಪ ಇವರು ಒಪ್ಪದೇ ಇದ್ದಾಗ ರಾಮಾಂಜಿನಪ್ಪ ಇವರ ವಿರುದ್ದ ಸುಳ್ಳು ದೂರುಗಳನ್ನು ಪಡೆದು, ಸುಳ್ಳು ಆರೋಪಗಳನ್ನು ಹೊರೆಸಿ ಕಿರುಕುಳ ನೀಡಿರುವುದು ಕಂಡುಬರುತ್ತದೆ ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

**5. ಎದುರುದಾರರು ಪೊಲೀಸ್ ತನಿಖಾ ವರದಿಗೆ ಆಕ್ಷೇಪಣೆ:**

ತಮ್ಮ ಆಕ್ಷೇಪಣೆಯಲ್ಲಿ ಸದರಿ ವರದಿಯ ಪ್ರತಿಯನ್ನು ಎದುರುದಾರರಿಗೆ ಕಳುಹಿಸಿ ಆಕ್ಷೇಪಣೆಯನ್ನು ಸಲ್ಲಿಸಲು ತಿಳಿಸಿದ್ದು, ಅದರಂತೆ ಆಕ್ಷೇಪಣೆಯನ್ನು ದಿನಾಂಕ;10-03-2022ರಂತೆ ಸಲ್ಲಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನೀರು ಸೋರಿಕೆಯಾಗುತ್ತಿದ್ದ ಬಗ್ಗೆ ರಿಪೇರಿ ಮಾಡಲು ಮೇಸ್ತ್ರೀಗಳಾದ ಪಿ. ನಾಗರಾಜ್ ಮತ್ತು ರಾಮಾಂಜಿನಪ್ಪ ಇವರಿಗೆ ಸೂಚಿಸಿ ಪೈಪ್‌ಲೈನ್ ರಿಪೇರಿ ಮಾಡಿಸಿ ನೀರು ಸೋರಿಕೆಯಾಗುವುದನ್ನು ನಿಲ್ಲಿಸಿರುವುದಾಗಿ, ಸದರಿ ಪುರಸಭೆಯಲ್ಲಿ ವಾರಕ್ಕೆ ಎರಡು ಬಾರಿ ಬಂದು ಕರ್ತವ್ಯ ನಿರ್ವಹಿಸುತ್ತಿದ್ದ ಗಜೇಂದ್ರ, ಕಿರಿಯ ಅಭಿಯಂತರರು ಪತ್ರಿಕೆಗಳಿಗೆ ನೀರು ಸೋರಿಕೆಗೆ ಪಿ. ನಾಗರಾಜ್ ಮತ್ತು ರಾಮಾಂಜಿನಪ್ಪ ಇವರುಗಳು ಕಾರಣ ಎಂದು ಮಾಹಿತಿ ನೀಡಿರುತ್ತಾರೆಂದು ಮತ್ತು ಯೋಜನಾ ನಿರ್ದೇಶಕರ ಸೂಚನೆಯ ಮೇರೆಗೆ ಪಿ.ನಾಗರಾಜ್ ಮತ್ತು ರಾಮಾಂಜಿನಪ್ಪ ಇವರುಗಳನ್ನು ಅಂದರೆ ಪಿ. ನಾಗರಾಜ್ ಇವರನ್ನು ಚಿಕ್ಕಬಳ್ಳಾಪುರ ರಸ್ತೆಯಲ್ಲಿರುವ ಪಂಪ್‌ಹೌಸ್‌ನಲ್ಲಿ ಆಪರೇಟರ್ ಮತ್ತು ರಾಮಾಂಜಿನಪ್ಪ ಇವರನ್ನು ಯಲುವಳ್ಳಿ ಕೆರೆಯಲ್ಲಿ ಪಂಪ್‌ಹೌಸ್‌ನಲ್ಲಿ ಆಪರೇಟರ್ ಆಗಿ ಕೆಲಸ ನಿರ್ವಹಿಸಲು ಜ್ಞಾಪನ ಪತ್ರ ನೀಡಿರುವುದಾಗಿ ತಿಳಿಸಿರುತ್ತಾರೆ. ಯಲುವಳ್ಳಿ ಕೆರೆಯಲ್ಲಿ ಕೊಳವೆ ಬಾವಿಗಳಿಗೆ ಅಳವಡಿಸಿದ ಪಂಪು ಮೋಟಾರುಗಳು ಬಿದ್ದು ಹೋಗಿದ್ದು ಅವುಗಳನ್ನು ಮೇಲೆತ್ತಿ ರಿಪೇರಿ ಮಾಡಿಸಲು ಸ್ಥಳೀಯವಾಗಿ ರಿಪೇರಿ ಮಾಡುವವರನ್ನು ಕರೆದುಕೊಂಡು ಹೋಗಿರುವುದು ಸತ್ಯವಾಗಿರುತ್ತದೆ ಹಾಗೂ ಈ ಸಂಬಂಧ ನನ್ನಿಂದ ಆದೇಶ ಪಡೆದು ಗುತ್ತಿಗೆದಾರರಿಗೆ ಬಿಲ್ಲನ್ನು ಪಾವತಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

**ಎದುರುದಾರರು ಮುಂದುವರೆದು ತಮ್ಮ ಆಕ್ಷೇಪಣೆಯಲ್ಲಿ** ರಾಮಾಂಜಿನಪ್ಪ ಇವರು ಯಲುವಳ್ಳಿ ಕೆರೆಯಿಂದ ಪಟ್ಟಣಕ್ಕೆ ನೀರು ಪೂರೈಕೆ ಮಾಡುವ ಕೊಳವೆಯ ಮಾರ್ಗ ಮಧ್ಯದಲ್ಲಿ ಸೋರಿಕೆಯಾಗುತ್ತಿದ್ದು ಈ ವಿಷಯವನ್ನು ಕಛೇರಿಗೆ ತಿಳಿಸದೇ ಕುಡಿಯುವ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳಲು ರೈತರೊಂದಿಗೆ ಸಹಕರಿಸಿ ಪಟ್ಟಣದ ನಾಗರೀಕರಿಗೆ ತೊಂದರೆಯನ್ನುಂಟು ಮಾಡಿರುತ್ತಾರೆಂದು, ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಶಾಮೀಲಾಗಿ ಪಟ್ಟಣದಲ್ಲಿ ಅಕ್ರಮ ನಲ್ಲಿಗಳನ್ನು ಹಾಕಿಸಲು ಹಾಗೂ ಪುರಸಭೆಯ ಬೋರ್‌ವೆಲ್‌ಗಳು ರಿಪೇರಿಗೆ ಬರುವಂತೆ ಮಾಡಿ

ಖಾಸಗಿಯವರಿಂದ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯುವ ಕೆಲಸಕ್ಕೆ ಸಹಕರಿಸಿರುವುದು ಸತ್ಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ರಾಮಾಂಜಿನಪ್ಪ ಇವರು ಜನಪ್ರತಿನಿಧಿಗಳೊಂದಿಗೆ ಶಾಮೀಲಾಗಿ ಕೆಲವು ವಾರ್ಡ್‌ಗಳಲ್ಲಿ ಅಕ್ರಮವಾಗಿ ನಲ್ಲಿಗಳನ್ನು ಅಳವಡಿಸುವ ಕೆಲಸಗಳನ್ನು ಮಾಡಿಸಿದ್ದು ಈ ಸಂಬಂಧ ವಾರ್ಡ್ ನಂ.23, 18 ಮತ್ತು 9 ಸ್ಥಳ ತನಿಖೆಗೆ ಹೋದಾಗ ಅಲ್ಲಿನ ನಿವಾಸಿಗಳನ್ನು ವಿಚಾರಿಸಿದಾಗ ಸದರಿಯವರು ಹನೀಫ್ ಉಲ್ಲಾ ರವರು ನಮ್ಮಿಂದ ಹಣ ಪಡೆದು ನಲ್ಲಿಗಳನ್ನು ಹಾಕಿಸಿಕೊಟ್ಟಿರುತ್ತಾರೆಂದು ಹೇಳಿಕೆ ನೀಡಿರುವುದಾಗಿ ತಿಳಿಸಿರುತ್ತಾರೆ. ಅಕ್ರಮವಾಗಿ ನಲ್ಲಿಗಳನ್ನು ಪಡೆದುಕೊಂಡಿರುವವರಿಂದ ಅರ್ಜಿಗಳನ್ನು ಪಡೆದು ನಿಗಧಿತ ಶುಲ್ಕ ಪಾವತಿಸಿಕೊಳ್ಳಲು ಕ್ರಮವಹಿಸುವಂತೆ ಮತ್ತು ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿಯದೇ ನಲ್ಲಿ ಸಂಪರ್ಕಗಳನ್ನು ನೀಡಬಾರದೆಂದು ತಿಳುವಳಿಕೆ ನೋಟೀಸ್‌ಗಳನ್ನು ನೀಡಲಾಗಿತ್ತು ಎಂದು ತಿಳಿಸಿರುತ್ತಾರೆ.

**ಎದುರುದಾರರು ಮುಂದುವರೆದು ತಮ್ಮ ಆಕ್ಷೇಪಣೆಯಲ್ಲಿ** ರಾಮಾಂಜಿನಪ್ಪ ಇವರು ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಪುರಸಭಾ ವ್ಯಾಪ್ತಿಯಲ್ಲಿ 106 ಬೋರ್‌ವೆಲ್‌ಗಳಿದ್ದು ಈ ಪೈಕಿ 72 ಬೋರ್‌ಗಳಿಗೆ ಪಂಪ್ ಮೋಟಾರು ಅಳವಡಿಸಿರುವುದು ಕಂಡು ಬಂದಿದ್ದು ಉಳಿದ ಬೋರ್‌ವೆಲ್‌ಗಳಿಗೆ ಈ ಹಿಂದೆ ಅಳವಡಿಸಿದ್ದ ಪಂಪ್ ಮೋಟಾರುಗಳು ಏನಾಗಿವೆ ಎಂಬುದರ ಮಾಹಿತಿ ನೀಡಿರುವುದಿಲ್ಲವೆಂದು, ಖರೀದಿ ಮಾಡಿರುವ ಪೈಪ್, ಕೇಬಲ್ ಹಾಗೂ ಸ್ಟಾರ್ಟರ್‌ಗಳು ಮತ್ತಿತರೆ ಸಾಮಗ್ರಿಗಳನ್ನು ಉಪಯೋಗಿಸಿದ ಬಗ್ಗೆ ಮಾಹಿತಿ ನೀಡಿರುವುದಿಲ್ಲ, ಕಿರಿಯ ಅಭಿಯಂತರರಾದ ಗಜೇಂದ್ರ ಇವರು ವಾರಕ್ಕೆ ಎರಡು ದಿವಸ ಬರಬೇಕಾಗಿದ್ದರೂ ಬಾರದೇ ಇದ್ದು ಎಲ್ಲಾ ಸಂಪೂರ್ಣ ಜವಾಬ್ದಾರಿಯನ್ನು ರಾಮಾಂಜಿನಪ್ಪ ಇವರಿಗೆ ಗಜೇಂದ್ರ ಇವರು ವಹಿಸಿರುತ್ತಾರೆ, ರಾಮಾಂಜಿನಪ್ಪ ಇವರು ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದು ಸದರಿ ಪೆಟ್ಟಿಗೆ ಅಂಗಡಿಗೆ ಪುರಸಭೆಯಿಂದ ಅನುಮತಿಯನ್ನು ಪಡೆದಿರುವುದಿಲ್ಲ ಹಾಗೂ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿರುವ ಸಂಬಂಧ ಹಲವಾರು ಬಾರಿ ಮೌಖಿಕವಾಗಿ ಸೂಚಿಸಿದ್ದರೂ ವಿದ್ಯುತ್ ಸಂಪರ್ಕವನ್ನು ತೆರವುಗೊಳಿಸದ ಕಾರಣ ಜನಪ್ರತಿನಿಧಿಗಳೊಂದಿಗೆ ಸೇರಿಕೊಂಡು ನಕಲಿ ಆಡಿಯೋ ರೆಕಾರ್ಡ್ ಸೃಷ್ಟಿಸಿರುತ್ತಾರೆಂದು ತಿಳಿಸಿರುತ್ತಾರೆ. ವಾರ್ಡ್ ನಂ.15ರಲ್ಲಿನ ನಿವಾಸಿಯಾದ ಮುಕುಂದಪ್ಪ ಬಿನ್ ಮುನಿಯಪ್ಪ ಇವರಿಂದ ಶ್ರೀ ಜೆ.ಎನ್. ಶ್ರೀನಿವಾಸ್, ಜನಪ್ರತಿನಿಧಿ ಇವರ ವಾರ್ಡ್ ನಂ.14ಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಮಾಸಿಕ ಬಾಡಿಗೆ ಆಧಾರದಲ್ಲಿ ಪಡೆಯಲು ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯನ್ನು ಕೌನ್ಸಿಲ್ ಸಭೆಯು ಅನುಮೋದನೆ ನೀಡಿರುತ್ತದೆ. ಇದೇ ಬೋರ್‌ವೆಲ್‌ನಿಂದ ವಾರ್ಡ್ ನಂ.15, 18 ಮತ್ತು 21 ವಾರ್ಡ್‌ಗಳಿಗೆ ಪ್ರತ್ಯೇಕ ಪೈಪ್‌ಲೈನ್ ಹಾಕಿಸಿ ವಾರ್ಡ್ ನಂ.15ಕ್ಕೆ ರಮೇಶ್.ಡಿ.ಕೆ. ಎಂಬುವವರ ಹೆಸರಿನಲ್ಲಿ, ವಾರ್ಡ್ ನಂ.18ರಲ್ಲಿ ಆಸೀಫ್ ಇವರ ಹೆಸರಿನಲ್ಲಿ, ವಾರ್ಡ್ ನಂ.19ಕ್ಕೆ ಆಂಜಿನಪ್ಪ ಮತ್ತು ವಾರ್ಡ್ ನಂ.21ಕ್ಕೆ ಸುಬ್ರಮಣಿ ಬಿ. ಎಂಬುವವರ ಹೆಸರಿನಲ್ಲಿ ಬೋರ್‌ವೆಲ್ ಬಾಡಿಗೆ ಪಡೆಯುವ ರೀತಿಯಲ್ಲಿ ನಕಲಿ ಕಡತಗಳನ್ನು ತಯಾರಿಸಿದ್ದು ಸದರಿ ಬಾಡಿಗೆಯನ್ನು ಪಾವತಿಸುವಂತೆ ಒತ್ತಡ ತರುತ್ತಿದ್ದು, ಬಿಲ್ಲುಗಳನ್ನು ಪಾವತಿಸದೇ ಇದ್ದಾಗ ಜನ ಪ್ರತಿನಿಧಿಗಳು ನೀರು ಸರಬರಾಜು

ಮಾಡುವುದನ್ನು ವಾರಗಟ್ಟಲೇ ತಡೆ ಹಿಡಿಯ ಆಯಾ ವಾರ್ಡ್‌ಗಳ ನಿವಾಸಿಗಳಿಗೆ ಕುಡಿಯುವ ನೀರಿಗೆ ತೊಂದರೆ ಮಾಡಿ ಒತ್ತಡ ನೀಡಿ ಸಾರ್ವಜನಿಕರನ್ನು ನನ್ನ ವಿರುದ್ಧ ಎತ್ತಿಕಟ್ಟಿ ಪುರಸಭೆ ಮುಂದೆ ಪ್ರತಿಭಟನೆಗಾಗಿ ಕಳುಹಿಸಿಕೊಡುತ್ತಿದ್ದರು ತಿಳಿಸಿರುತ್ತಾರೆ. ನಕಲಿ ಆಡಿಯೋ ರೆಕಾರ್ಡ್ ಸೃಷ್ಟಿ ಮಾಡಿರುತ್ತಾರೆಂದು, ಸ್ಯಾನಿಟರಿ ಮೇಸ್ತ್ರಿ ನಾಗರಾಜು ಇವರನ್ನು ಹೊಸಕೋಟೆ ನಗರಸಭೆಯಿಂದ ವರ್ಗಾವಣೆ ಮಾಡಿದ್ದು ವಿಜಯಪುರ ನಗರಸಭೆಯ ಕೇಂದ್ರ ಸ್ಥಾನದಲ್ಲಿದ್ದು ಕರ್ತವ್ಯ ನಿರ್ವಹಿಸದೇ ಪ್ರತಿ ದಿನ ಹೊಸಕೋಟೆಯಿಂದ ಬೆಳಿಗ್ಗೆ 7-00 ಗಂಟೆಗೆ ಬಂದು ಕರ್ತವ್ಯ ನಿರ್ವಹಿಸುತ್ತಿದ್ದು ಈ ಸಂಬಂಧ ನೋಟೀಸ್ ನೀಡಿರುವುದಾಗಿ ತಿಳಿಸಿರುತ್ತಾರೆ. ಅದರಂತೆ, ಪರಿಸರ ಅಭಿಯಂತರರಾಗಿ ಶ್ರೀ ಮಹೇಶ್.ಹೆಚ್.ಆರ್. ಇವರು ಆರೋಗ್ಯ ಶಾಖೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡಿದರು ಯಾವುದೇ ಕೆಲಸವನ್ನು ಅರ್ಥ ಮಾಡಿಕೊಂಡು ಕೆಲಸ ಮಾಡದೇ ಇದ್ದ ಕಾರಣದಿಂದ ನೋಟೀಸ್ ನೀಡಿರುವುದಾಗಿ ತಿಳಿಸಿರುತ್ತಾರೆ.

**6. ದೂರುದಾರರು ಎದುರುದಾರರು ಸಲ್ಲಿಸಿರುವ ಪ್ರತ್ಯುತ್ತರಕ್ಕೆ ಆಕ್ಷೇಪಣೆ:**

ದಿನಾಂಕ:18-04-2022ರಂತೆ ದೂರುದಾರರು ಆಕ್ಷೇಪಣೆಯಲ್ಲಿ ಚುನಾಯಿತ ಸದಸ್ಯರಾದ ವಿ. ನಂದಕುಮಾರ್, ವಾರ್ಡ್ ನಂ.12, ರಾಜಣ್ಣ, ವಾರ್ಡ್ ನಂ.5, ಶ್ರೀಮತಿ ತಾಜುನ್ನೀಸಾ ಮಹೆಬೂಬ್ ಪಾಷಾ, ವಾರ್ಡ್ ನಂ.15, ಶ್ರೀಮತಿ ರಾಧಮ್ಮ ಪ್ರಕಾಶ್, ವಾರ್ಡ್ ನಂ.14, ಭೈರೇಗೌಡ, ವಾರ್ಡ್ ನಂ.17 ಮತ್ತು ಸೈಯದ್ ಇಕ್ಬಾಲ್ ಅಹ್ಮದ್, ವಾರ್ಡ್ ನಂ.23 ಇವರುಗಳ ವೈಯಕ್ತಿಕ ಮತ್ತು ವಿಜಯಪುರ ಪುರಸಭೆಯ ಮಾಜಿ ಮುಖ್ಯಾಧಿಕಾರಿಯಾದ ಎ.ಹೆಚ್. ನಾಗರಾಜ್ ಇವರಿಗೆ ಸಹಾಯಕ ಮಾಡುವ ದೃಷ್ಟಿಯಿಂದ ದೂರನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ಅಮರೇಶ್ ಗೌಡ.ಎ. ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ದಿನಾಂಕ:05-04-2022ರಂತೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಎದುರುದಾರರಾದ ಶ್ರೀ ಎ.ಹೆಚ್. ನಾಗರಾಜು, ಪುರಸಭೆ ಮುಖ್ಯಾಧಿಕಾರಿ ಇವರಿಗೆ ನೋಟೀಸ್ ನೀಡಿದ್ದು ಅದರಂತೆ ಎದುರುದಾರರು ರಾಮಾಂಜಿನಪ್ಪ ಇವರ ವಿರುದ್ದವೇ ಆರೋಪ ಮಾಡಿ ದಾಖಲೆಗಳನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ವಾಟರ್‌ಮ್ಯಾನ್‌ಗಳು, ಇತರೆ ಸಿಬ್ಬಂದಿ ಹಾಗೂ ನಗರಸಭಾ ಸದಸ್ಯರು/ಮಾಜಿ ನಗರಸಭಾ ಸದಸ್ಯರು ಇವರುಗಳನ್ನು ಪ್ರತ್ಯೇಕವಾಗಿ ವಿಚಾರಣೆ ಮಾಡಿ ಹೇಳಿಕೆ ದಾಖಲು ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಹನೀಫ್ ಇವರ ಸಮ್ಮುಖದಲ್ಲಿ ಯಾವುದೇ ಸಾಕ್ಷಿಗಳ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ದೂರು ವಿಚಾರಣೆ ಸಮಯದಲ್ಲಿ ಎದುರುದಾರರಾದ ಶ್ರೀ ಎ.ಹೆಚ್. ನಾಗರಾಜು ಇವರು ಕೆಲವು ಪೊಲೀಸ್ ಅಧಿಕಾರಿಗಳು, ಪತ್ರಕರ್ತರಾದ ರಫೀವುಲ್ಲಾ ಇವರ ಮುಖಾಂತರ ನನಗೆ ದೂರವಾಣಿ ಕರೆ ಮಾಡಿಸಿ ಅರ್ಜಿ ವಿಚಾರಣೆಯನ್ನು ಎದುರುದಾರರ ಪರ ಮಾಡುವಂತೆ ಹೇಳಿಸಿರುತ್ತಾರೆಂದು ತಿಳಿಸಿರುತ್ತಾರೆ.

ದೂರುದಾರರು ತಮ್ಮ ಪತಿ ರಾಮಾಂಜಿನಪ್ಪ ಇವರ ಮೇಲೆ ಎದುರುದಾರರಾದ ಶ್ರೀ ಎ.ಹೆಚ್. ನಾಗರಾಜು, ಮುಖ್ಯಾಧಿಕಾರಿ, ಪುರಸಭೆ, ವಿಜಯಪುರ ಇವರು ದಿನಾಂಕ:09-07-2019ರಂದು ದೂರುದಾರರ ಗಂಡನಿಗೆ ದೂರವಾಣಿ ಕರೆ ಮಾಡಿ 23ನೇ ವಾರ್ಡಿನ ಪುರಸಭಾ ಸದಸ್ಯರ ಪತಿ ಎ.ಆರ್. ಹನೀಫ್ ಉಲ್ಲಾ ರವರ ಮೇಲೆ ಸಾರ್ವಜನಿಕರಿಂದ ಹಣ ಪಡೆದಿದ್ದಾರೆ ಎಂದು 25 ದೂರುಗಳನ್ನು ತೆಗೆದುಕೊಂಡು ಬರಲು ಒತ್ತಾಯಿಸಿದ್ದು, ಸುಳ್ಳು ಆರೋಪ ಮಾಡಿ ಅಮಾನತ್ತು ಮಾಡುತ್ತೇವೆ ಇಲ್ಲವಾದಲ್ಲಿ ಬೇರೆ ಊರಿಗೆ ವರ್ಗಾವಣೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದು, ದೂರುದಾರರ ಗಂಡನು ಕಿರುಕುಳ ತಾಳದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೇಳಿರುತ್ತಾರೆಂದು ಸದರಿ ಸಂಭಾಷಣೆಯನ್ನು ಹಾಜರುಪಡಿಸಿದ್ದ ಸಂಬಂಧ

**7. ಒಟ್ಟಾರೆ ಅಭಿಪ್ರಾಯ:**

ದೂರುದಾರರ ಆಪಾದನೆ, ಎದುರುದಾರರಿಂದ ಆಕ್ಷೇಪಣೆ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗೆ ದೂರುದಾರರು ಸಲ್ಲಿಸಿರುವ ಪ್ರತ್ಯುತ್ತರ, ಎದುರುದಾರರ ವಿರುದ್ಧ ಪೊಲೀಸ್ ಇನ್ಸ್‌ಪೆಕ್ಟರ್ ಇವರು ನೀಡಿರುವ ವರದಿ, ವರದಿಗೆ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆ, ಸದರಿ ಆಕ್ಷೇಪಣೆಗೆ ದೂರುದಾರರು ಸಲ್ಲಿಸಿರುವ ಸಮಜಾಯಿಷಿ/ಉತ್ತರ ಇವುಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

1) ವಿಜಯಪುರ ಪುರಸಭಾ ವ್ಯಾಪ್ತಿಯಲ್ಲಿ ನೀರು ಸೋರಿಕೆಯಾಗುತ್ತಿರುವ ಮಾಹಿತಿಯು ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಎದುರುದಾರರ ಗಮನಕ್ಕೆ ಬಂದಿದ್ದರೂ ಸಹ ಯಾವುದೇ ಕ್ರಮಕೈಗೊಳ್ಳದೇ ಸುಮ್ಮನಿದ್ದು ಸದರಿ ಸೋರಿಕೆಗೆ ದೂರುದಾರರ ಪತಿ ರಾಮಾಂಜಿನಪ್ಪ ಇವರನ್ನು ಹೊಣೆಗಾರರನ್ನಾಗಿ ಮಾಡಿರುತ್ತಾರೆ.

2) ಯಲುವಳ್ಳಿ ಕೆರೆಯಲ್ಲಿ ಮೋಟಾರ್ ಪಂಪ್ ಬಿದ್ದು ಹೋಗಿದ್ದು, ರಾಮಾಂಜಿನಪ್ಪ ಇವರು ಸದರಿ ಕರ್ತವ್ಯವನ್ನು ನಿರ್ವಹಿಸದೇ ಇದ್ದು ಸಂತೋಷ್ ಎಂಟರ್‌ಪ್ರೈಸಸ್ ಇವರಿಂದ ರಿಪೇರಿ ಮಾಡಿಸಿರುವುದಾಗಿ ಎದುರುದಾರರು ತಿಳಿಸಿರುವುದು ಪೊಲೀಸ್ ವರದಿಯಿಂದ ಸುಳ್ಳು ಎಂಬುದು ಸಾಬೀತಾಗಿರುತ್ತದೆ. ಅಲ್ಲದೇ ಸಂತೋಷ್ ಎಂಟರ್‌ಪ್ರೈಸಸ್‌ನ ಸಂತೋಷ ಇವರೇ ಖುದ್ದು ನೀಡಿರುವ ಹೇಳಿಕೆಯಿಂದ ಎದುರುದಾರರು ಸುಳ್ಳು ಮಾಹಿತಿ ನೀಡಿರುವುದು ಸಾಬೀತಾಗಿರುತ್ತದೆ.

3) ಚಿಕ್ಕನಹಳ್ಳಿ ಕೆರೆಯಲ್ಲಿ ಉಂಟಾದ ಸಮಸ್ಯೆಗೆ ಯಲುವಳ್ಳಿ ಕೆರೆಯ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದ್ದ ರಾಮಾಂಜಿನಪ್ಪ ಇವರು ಜವಾಬ್ದಾರರಾಗುವುದಿಲ್ಲ ಎಂಬ ಮಾಹಿತಿಯು ಪೊಲೀಸ್ ವರದಿಯಂತೆ

ಸ್ಪಷ್ಟವಾಗಿರುತ್ತದೆ. ಆದ್ದರಿಂದ ಸದರಿ ಸಮಸ್ಯೆಗೆ ರಾಮಾಂಜಿನಪ್ಪ ಕಾರಣರು ಆಗದೇ ಇದ್ದರೂ ಎದುರುದಾರರು ರಾಮಾಂಜಿನಪ್ಪ ಇವರನ್ನು ಜವಾಬ್ದಾರರನ್ನಾಗಿ ಮಾಡಿರುವುದು ತಪ್ಪಾಗಿರುತ್ತದೆ.

4) ಶಿವಕುಮಾರ್ ಮತ್ತು ಉಮೇಶ್ ಇವರುಗಳ ನೀಡಿರುವ ಹೇಳಿಕೆಯ ಪ್ರಕಾರ ಎದುರುದಾರರು ಬಳಿ ಯಾರೋ ಬರೆದಿದ್ದ ದೂರು ಅರ್ಜಿಗೆ ಸಹಿ ಮಾಡಲು ಹೇಳಿ ಸಹಿ ಮಾಡಿಸಿರುವುದು ಎದುರುದಾರರ ದುರುದ್ದೇಶವಾಗಿರುತ್ತದೆ.

5) ರಾಮಾಂಜಿನಪ್ಪ ಇವರು ಜನ ಪ್ರತಿನಿಧಿಗಳೊಂದಿಗೆ ಶಾಮೀಲಾಗಿ ಅಕ್ರಮ ನಲ್ಲಿಗಳ ಸಂಪರ್ಕ ನೀಡಿದ್ದರ ಸಂಬಂಧ ಯಾವುದೇ ನೋಟೀಸ್ ಜಾರಿ ಆಗಿರುವುದಿಲ್ಲ.

6) 72 ಬೋರ್‌ವೆಲ್‌ಗಳಿಗೆ ಸಂಬಂಧಿಸಿದ ಪಂಪ್ ಮೋಟಾರ್, ಪೈಪ್, ಕೇಬಲ್ ಮತ್ತು ಸ್ಟಾರ್ಟರ್‌ಗಳ ಜವಾಬ್ದಾರಿಯು ಕಿರಿಯ ಅಭಿಯಂತರರಾದ ಶ್ರೀ ಗಜೇಂದ್ರ ಇವರಿಗೆ ಸೇರಿದ್ದು, ಗಜೇಂದ್ರ ಇವರು ಅನಧಿಕೃತವಾಗಿ ಕಛೇರಿಗೆ ಗೈರು ಹಾಜರಾಗುತ್ತಿದ್ದರು ಯಾವುದೇ ಕ್ರಮಕೈಗೊಳ್ಳದೇ ಎದುರುದಾರರು ಸುಮ್ಮನಿದ್ದು ರಾಮಾಂಜಿನಪ್ಪ ಇವರೇ ಜವಾಬ್ದಾರರು ಎಂದು ಆರೋಪ ಹೊರಿಸಿರುವುದು ಸುಳ್ಳಾಗಿರುತ್ತದೆ.

7) ರಾಮಾಂಜಿನಪ್ಪ ಇವರು ಪೆಟ್ಟಿಗೆ ಅಂಗಡಿ ಇಟ್ಟು ಅಕ್ರಮ ವಿದ್ಯುತ್ ಸಂಪರ್ಕ ಪಡೆದಿರುವ ಸಂಬಂಧ ಎದುರುದಾರರು ಯಾವುದೇ ನೋಟೀಸ್ ನೀಡಿರುವುದಿಲ್ಲವಾದ್ದರಿಂದ ಅಕ್ರಮ ವಿದ್ಯುತ್ ಸಂಪರ್ಕ ಎಂಬುದು ನಿರಾಧಾರವಾಗಿರುತ್ತದೆ.

8) ಜನ ಪ್ರತಿನಿಧಿಗಳೊಂದಿಗೆ ಶಾಮೀಲಾಗಿ ಬೋರ್‌ವೆಲ್‌ನಿಂದ ಸರಬರಾಜಾದ ನೀರಿಗೆ ನಕಲಿ ಬಿಲ್ಲುಗಳನ್ನು ಸಲ್ಲಿಸಿರುವ ವಿಷಯಕ್ಕೂ ರಾಮಾಂಜಿನಪ್ಪ ಇವರಿಗೂ ಯಾವುದೇ ಸಂಬಂಧ ಇಲ್ಲದಿರುವುದು ತನಿಖೆಯಿಂದ ಕಂಡುಬಂದಿರುತ್ತದೆ.

9) ಅಂತಿಮವಾಗಿ ಆಡಿಯೋ ಕ್ಲಿಪ್‌ನಿಂದ ಎದುರುದಾರರು ರಾಮಾಂಜಿನಪ್ಪ ಇವರಿಗೆ 25 ದೂರುಗಳನ್ನು ಪುರಸಭಾ ಸದಸ್ಯರಾದ ಹನೀಫುಲ್ಲಾ ಇವರ ವಿರುದ್ದ ತರಬೇಕೆಂದು ಒತ್ತಡ ಹಾಕಿರುವುದು ಸಾಬೀತಾಗಿರುತ್ತದೆ.

ಆದುದರಿಂದ, ಮೇಲಿನ ಕಾರಣಗಳಿಂದ ಹಾಗೂ ಕಡತವನ್ನು ಪರಿಶೀಲಿಸಿದಾಗ ಎದುರುದಾರರಾದ ಶ್ರೀ ಎ.ಹೆಚ್. ನಾಗರಾಜ್, ಮುಖ್ಯಾಧಿಕಾರಿ, ನಗರಸಭೆ, ವಿಜಯಪುರ ಟೌನ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು (ಎದುರುದಾರರು ಈ ಕಛೇರಿಗೆ ಸಲ್ಲಿಸಿರುವ ಸದರಿಯವರ ಸೇವಾ ವಿವರದಲ್ಲಿ ಹುಟ್ಟಿದ

ದಿನಾಂಕ:16-07-1964 ಎಂದು ನಮೂದಿಸಿದ್ದು ಸದರಿ ಹುಟ್ಟಿದ ದಿನಾಂಕದ ಆಧಾರದ ಮೇಲೆ ಸದರಿಯವರ ನಿವೃತ್ತಿ ದಿನಾಂಕವು 31-07-2024 ಆಗುತ್ತದೆ) ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (i) ರಿಂದ (iii) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಉಪಲೋಕಾಯುಕ್ತರು-2 ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phaneendra 17/8/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ.